ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. Pp. 191-194
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ‘ಗಂಧದ ಮಡುವ ಕಲಕೂತ’ ಕೃತಿಯಲ್ಲಿ ಕಾಡುನಾಡು ಸಂಬಂಧ: ಒಂದು ವಿಶ್ಲೇಷಣೆ

**ಯಶೋಧ ಎಸ್. ಪಿ**
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾಜಿನಗರ, ಬೆಂಗಳೂರು.

***Abstract:***

*‘ಗಂಧದ ಮಡುವ ಕಲಕೂತ’ ಕೃತಿಯು ಲಿಖಿತ ಜಾನಪದ (1979) ಮತ್ತು ಬಂಡಾಯ ಜಾನಪದ (1995) ಪುಸ್ತಕಗಳ ನಂತರ ರಂಗಾರೆಡ್ಡಿ ಕೋಡಿರಾಂಪುರ ಅವರು ಹೊರತಂದಿರುವ ಮೂರನೇ ಕೃತಿಯಾಗಿದೆ. ಈ ಕೃತಿಯು ವಿಚಾರ ಸಂಕಿರಣಗಳಿಗೆ, ಸ್ಮರಣ ಸಂಚಿಕೆಗಳಿಗೆ, ಸಂಭಾವನಾ ಗ್ರಂಥಗಳಿಗೆ, ವಿಶ್ವಕೋಶಗಳಿಗಾಗಿ ಬರೆದ ಲೇಖನಗಳನ್ನೆಲ್ಲಾ ಸೇರಿಸಿ ಬರೆದ ಪುಸ್ತಕ ಇದಾಗಿದೆ. ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಬಹುಮುಖಿ ಅಧ್ಯಯನದ ವಿನ್ಯಾಸ ಇಲ್ಲಿನ ಲೇಖನಗಳಲ್ಲಿ ಎದ್ದು ಕಾಣುತ್ತದೆ. ಜನಪರ ಮತ್ತು ಜೀವಪರ ನಿಲುವಿನಿಂದ ಜನಪದ ಸಂಸ್ಕೃತಿಯ ಅಧ್ಯಯನ ನಡೆಯುತ್ತಿರುವ ಈ ದಿನಗಳಲ್ಲಿ ಈ ಲೇಖನಗಳು ಓದುಗರನ್ನು ಹೆಚ್ಚು ಚಿಂತನೆಗೆ ಹಚ್ಚುತ್ತಿವೆ.*

***Keywords:*** *ಕನ್ನಡ ಸಾಹಿತ್ಯ, ಜನಪದ ಸಾಹಿತ್ಯ, ರಂಗಾರೆಡ್ಡಿ ಕೋಡಿರಾಂಪುರ, ಗಂಧದ ಮಡುವ ಕಲಕೂತ*

**ಪೀಠಿಕೆ**

‘ಗಂಧದ ಮಡುವ ಕಲಕೂತ’ ಎನ್ನುವ ಶೀರ್ಷಿಕೆಯು ಇಲ್ಲಿ ಅನ್ವರ್ಥಕವಾಗಿ ಬಳಕೆಯಾಗಿದೆ. ಇದು ‘ಸಗಣಿ ಜೊತೆ ಸರಸವಾಡುವುದಕ್ಕಿಂತ ಗಂಧದ ಜೊತೆ ಗುದ್ದಾಡುವುದೆ ಲೇಸು’ ಎನ್ನುವ ಗಾದೆಯನ್ನು ನೆನಪಿಸುತ್ತದೆ. ಕಾರಣವಿಷ್ಟೇ ಜನಪದ ಸಾಹಿತ್ಯವೆನ್ನುವುದು ಗಂಧದ ಮಡುವಿದ್ದಂತೆ ಅಗಾಧವಾದ ಸಾಹಿತ್ಯ ರಾಶಿಯಿದೆ. ಇದನ್ನು ಕಲಕಿದರೆ ಸುಗಂಧದ ಅಲೆಗಳು ಏಳುತ್ತವೆ. ಅದರಲ್ಲಿ ಚಲನೆ ಉಂಟಾದ ಕೂಡಲೇ ಸುಗಂಧ ಗಾಳಿಯಲ್ಲಿ ಪಸರಿಸಿ ದಿಕ್ಕುಗಳಿಗೆಲ್ಲ ಪಸರಿಸುತ್ತದೆ. ಇಲ್ಲಿನ ಒಂದೊಂದು ಲೇಖನವೂ ಒಂದೊಂದು ಅಲೆಯಾಗಿ ಗಂಧ ಚೆಲ್ಲುತ್ತಾ ಪರಿಮಳವ ಗಾಳಿಗೆ ಸೇರಿಸುತ್ತ ವಾತಾವರಣವನ್ನೆಲ್ಲಾ ಗಂಧಮಯವನ್ನಾಗಿ ಮಾಡುತ್ತದೆ. ಇಲ್ಲಿಯ ಲೇಖನಗಳು ಪುನರಾವರ್ತನೆಯೆನಿಸಿದರು ಒಂದೊಂದು ವಿಶೇಷತೆಯಿಂದ ಕೂಡಿವೆ. ಈ ಕೃತಿಯಲ್ಲಿ ಸುಮಾರು ಹದಿನೇಳು ಲೇಖನಗಳಿವೆ. ಪ್ರತಿಯೊಂದು ಲೇಖನವೂ ಜನಪದರ ಬದುಕಿಗೆ ಸಂಬಂಧಪಟ್ಟವೇ ಆಗಿವೆ.

ಈ ಕೃತಿಯಲ್ಲಿ ಕನ್ನಡ ಜಾನಪದ ಲೋಕದ ಅನೇಕ ಮಗ್ಗಲುಗಳನ್ನು ಕಲಕಿ ನೋಡಿದ್ದಾರೆ. ಪರಿಣಾಮ ಜಾನಪದ ಕುರಿತಂತೆ ಒಳ್ಳೆಯ ಅರ್ಥ ವಿಸ್ತಾರಗಳು ದೊರಕಿದಂತಾಗಿ ಜಾನಪದವು ಸಾಮೂಹಿಕ ಗುಣವುಳ್ಳದ್ದು ಎಂದು ಪ್ರಸ್ತಾಪಿಸಿ ವಾಸ್ತವ ಜಗತ್ತಿನಲ್ಲಿ ನಿಂತು ನೋಡಿರುವ ಲೇಖಕರು ವ್ಯವಹಾರಿಕ ಜಗತ್ತಿನಲ್ಲಿ ಕುಟುಂಬಗಳೇ ವಿಘಟನೆಗೆ ಒಳಗಾಗುತ್ತಿವೆ. ಅದರಲ್ಲೂ ನಗರ ಸಮಾಜದಲ್ಲೇ ಈ ಬಗೆಯ ವಿಘಟನೆ ಮತ್ತು ವೈಮನಸ್ಸು ಹೆಚ್ಚಾಗುತ್ತಿದೆ. ಇಂಥವೇಳೆ ಜಾನಪದ ಲೋಕ ನಮಗೆ

***Please cite this article as:*** ಯಶೋಧ, ಎಸ್. ಪಿ. (2024). ‘ಗಂಧದ ಮಡುವ ಕಲಕೂತ’ ಕೃತಿಯಲ್ಲಿ ಕಾಡುನಾಡು ಸಂಬಂಧ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(2), 191–194

ಮಾದರಿಯಾಗಿ ಆದರ್ಶವಾಗಿ ಕಾಣಬೇಕು. ಜಾನಪದಕ್ಕೆ ಯಾವಾಗಲೂ ಇರುವ ತಾಜಾತನ ಲೇಖನಗಳನ್ನು ಅನೇಕ ಕಡೆ ಗುರ್ತಿಸುತ್ತಾರೆ. ಉದಾ: "ಸಮುದ್ರ ನೋಡದೆ ಕವಿ ಸಮುದ್ರ ವರ್ಣಿಸುವುದಾದರೆ ಎಷ್ಟು ಮನಮೋಹಕ" ಎಂಬ ಅಂಶಗಳೆಲ್ಲಾ ಕವಿಗೆ ಸಂಬಧಿಸಿದವು.

ಲೇಖಕರು ಈ ಲೇಖನದ ಆರಂಭದಲ್ಲಿಯೇ ತೆಲುಗಿನ ಜಾನಪದ ಒಗಟನ್ನು ಹೇಳುವ ಮೂಲಕ ಆರಂಭಿಸಿದ್ದಾರೆ.

***ಕಾಡಿನಲ್ಲಿ ಹುಟ್ಟಿ ಕಾಡಿನಲ್ಲಿ ಬೆಳೆದು***
***ನಮ್ಮ ಮನೆಗೆ ಬಂದು ಮಡಕೆಯಲ್ಲಿ ಓಡಾಡಿ***
***ಮೇಲೆ ಕೆಳಗೆ ಸರಿದು ನಮಗೇನೋ ಕೊಟ್ಟಿತು.***
***ತಾನೇನೂ ಇಟ್ಟುಕೊಳ್ಳುವುದಿಲ್ಲ (ಕಡೆಗೋಲು).***

ಈ ಪದ್ಯವನ್ನು ನೋಡಿದಾಗ ಕಾಡಿನ ಒಂದು ಉತ್ಪನ್ನ ಕಡೆಗೋಲು ಇಷ್ಟು ಉಪಕಾರ ಮಾಡಿ ನಿಸ್ವಾರ್ಥಿಯಾಗಿದ್ದರೆ ಅದರ ಮೂಲವಾದ ಕಾಡು ಇನ್ನೆಷ್ಟು ಬಗೆಯಲ್ಲಿ ಮನುಷ್ಯನಿಗೆ ಉಪಯೋಗಿಯಾಗಿ ನಿಸ್ವಾರ್ಥಿಯಾಗಿರಬೇಡ. ಅಂದರೆ ಕಾಡು ಎಲ್ಲಾ ಬಗೆಯ ಜೀವಿಗಳಿಗೆ ಪೋಷಕವಾದದ್ದು.

ಪ್ರಕೃತಿಯ ಮೂಲಭೂತ ಶಿಶುವಾಗಿ ಮನುಷ್ಯನಿದ್ದಾನೆ. ಪ್ರಕೃತಿಯ ಬದಲಾವಣೆಯಂತೆ ಅವನು ಬದಲಾಗುತ್ತಾನೆ. ಕಾಡಿನ ಜೊತೆ ಮನುಷ್ಯನ ಸಮಾಜದ ಸಂಬಂಧ ಅಂದರೆ ನಾಡಿನ ಸಂಬಂಧ. ಮೂರು ಘಟ್ಟಗಳಲ್ಲಿದೆ. (1)ಬುಡಕಟ್ಟುಗಳ ಸಮಾಜದ ಹಂತ, (2)ಊಳಿಗಮಾನ್ಯ ಸಮಾಜದ ಹಂತ, (3)ಬಂಡವಾಳಶಾಹಿ ಮತ್ತು ವಸಾಹತುಶಾಹಿ ಹಂತ. ಇದನ್ನು ಭೇಟೆ, ಪಶುಪಾಲನೆ, ಕೃಷಿಯ ಹಂತ, ಕಾಡುಗಳ್ಳತನದ ಹಂತವೆಂತಲೂ ಅರ್ಥೈಸಿಕೊಳ್ಳಬಹುದು. ಮೂಲ ಉಗಮ ಅಮೀಬದಿಂದ ಮನುಷ್ಯನವರೆಗೆ ಜೀವ ವಿಕಾಸವಾಗಿ ಬಂದಂತಹ ಸಂದರ್ಭದಲ್ಲಿ ಮನುಷ್ಯನ ವರ್ತನೆ ಪ್ರಾಣಿಗಳಿಗಿಂತ ಬೇರೆಯಾಗಿರಲಿಲ್ಲ. ಪ್ರಾಣಿಗಳು ಹೇಗೆ ದೈನಂದಿನ ಆಹಾರವನ್ನು ಅಂದಂದೇ ದೊರಕಿಸಿಕೊಂಡು ತೃಪ್ತವಾಗಿರುವವೋ ಅಂತಹದೇ ಸ್ಥಿತಿಯಲ್ಲಿ ಆತನೂ ಇದ್ದ, ಅಖಂಡ ಕಾಡಿನಲ್ಲಿ ಮನುಷ್ಯ ಯಕಃಶ್ಚಿತ್ ಪ್ರಾಣಿಯಾಗಿದ್ದ. ಅಂದರೆ ಲೆಕ್ಕಕ್ಕೇ ಬಾರದವನಾಗಿದ್ದ. ತನ್ನ ಭೇಟೆಯ ಜಾಡನ್ನು ಜನಪದರು ಈ ರೀತಿ ವರ್ಣಿಸಿದ್ದಾರೆ.

***ಸರ್ಪನಾ ದಾರೀಲಿ ಸಂಜೇನು ನಾ ಬಳಸಿ***
***ನೆಪ್ಪಿಲ್ದೆ ಮಲೆಗೆ ಬರಬಹುದೇ । ಏಳುಮಲೆ***
***ನೆಪ್ಪ ತೋರ್‍ಯಾವ ಹುಲಿಕರಡಿ***

ಹೀಗೆ ಅಲೆಮಾರಿಯಾಗಿದ್ದವ ಒಂದೆಡೆ ನೆಲೆನಿಂತು ತನ್ನಂತಿರುವರ ಗುಂಪುಗಳನ್ನು ಮಾಡಿಕೊಂಡು ಜೀವಿಸಲೂ ಆರಂಭಿಸಿದ ಮೇಲೆ ಬುಡಕಟ್ಟುಗಳ ಸಮಾಜ ರಚನೆ ಅಸ್ತಿತ್ವಕ್ಕೆ ಬಂತು ಇಂಥ ಸಮುದಾಯಗಳು ಕಾಡಿನಲ್ಲಿ ನೀರಿರುವ ತಾಣಗಳಲ್ಲಿ ನೆಲೆ ನಿಂತು ಪರಸ್ಪರ ಸಹಕಾರಿಗಳಾಗಿ, ಋತುಮಾನಗಳಿಗೆ ತಕ್ಕಂತೆ ವಲಸೆ ಹೋಗುತ್ತಾ ಜೀವನ ವಿಧಾನವನ್ನು ರೂಪಿಸಿಕೊಂಡವು. ಹೀಗೆ ವಲಸೆ ಹೋಗುತ್ತಿರುವಾಗ ಮತ್ತೊಂದು ಗುಂಪು ಎದುರಾದಾಗ ಕೆಲವೊಮ್ಮೆ ಯುದ್ಧವೇ ನಡೆಯುತ್ತಿತ್ತು. ಆಹಾರ ಸಂಗ್ರಹಣೆಗೋ, ಬೇಟೆಗೋ ಒಂದೇ ಬುಡಕಟ್ಟಿನ ಬೇರೆ ಬೇರೆ ಗ್ರಾಮದವರು ಯುದ್ಧ ಮಾಡುತ್ತಿದ್ದರು ಆಗ ಒಂದುಕಡೆಯ ವಾಸಿಗಳಲ್ಲಿ ಒಟ್ಟಾಗಿ ಇನ್ನೊಂದು ಗುಂಪನ್ನು ಎದುರಿಸುತ್ತಿದ್ದರು. ಅಂದರೆ ಭೇಟೆಯ ಈ ಹಂತದಲ್ಲಿ ರಕ್ತ ಸಂಬಂಧ ಎಂಬುದು ರೂಪುಗೊಂಡಿತು. ಇಂಥ ಬಂಧುತ್ವ ಹೊಂದಿದ ಗ್ರಾಮಗಳು ತಮ್ಮ ತಮ್ಮಲ್ಲಿ ಒಬ್ಬ ಪ್ರಮುಖನನ್ನು ತಮ್ಮ ನಾಯಕನನ್ನಾಗಿ ಆರಿಸಿಕೊಂಡು ಅವನನ್ನು 'ಗ್ರಾಮಣಿ' ಎಂದು ಕರೆದುಕೊಂಡರು. ಯಾವಾಗ ಅಲೆಮಾರಿತನ ನಿಂತು ಖಾಯಂ ಆಗಿ ಒಂದು ಕಡೆ ನೆಲೆಸಿದರೋ ಆಗ ಗ್ರಾಮಣಿ ಎನ್ನುವುದು ಸ್ವಂತ ಹಕ್ಕಿನಂತಾಯಿತು. ಗ್ರಾಮಣಿಯ ವಂಶದವನೊಬ್ಬನಿಗೆ ಸಾಮರ್ಥ್ಯವಿರಲಿ, ಇಲ್ಲದಿರಲಿ ಗ್ರಾಮಣಿಯಾಗುವ ಹಕ್ಕು ಲಭಿಸಿದಂತಾಯಿತು. ಈ

ಹೊತ್ತಿಗಾಗಲೇ ಬೇಟೆಯ ಜೊತೆಗೆ ಪಶುಪಾಲನೆಯೂ ಬೆಳೆದು ಆರ್ಥಿಕ ಚಟುವಟಿಕೆಗಳು ವಿಸ್ತಾರಗೊಂಡವು ಮುಂದೆ ಗ್ರಾಮಣಿ ಸ್ಥಾನಕ್ಕೆ ಬುಡಕಟ್ಟುಗಳಲ್ಲೇ ಘರ್ಷಣೆಗಳು ಆರಂಭವಾದವು ಏನೇ ಆದರೂ ಕಾಡಿಗೆ ವಿಪತ್ತು ಸಂಭವಿಸುತ್ತಿತ್ತು.

ಮನುಷ್ಯ ಮತ್ತು ಅವನ ಚಾರಿತ್ರಿಕ ಬೆಳವಣಿಗೆಯು ಕಾಡಿನಲ್ಲಿ ಸ್ಥಿತ್ಯಂತರಗಳನ್ನು ಉಂಟು ಮಾಡಿದೆ. ಮೊದಲ ಹಂತದಲ್ಲಿ ಮನುಷ್ಯ ಪ್ರಕೃತಿಯೇ ಆಗಿದ್ದವನು ಎರಡನೇ ಹಂತದಲ್ಲಿ ಅದರಿಂದ ಪಕ್ಕಕ್ಕೆ ಸರಿದಿದ್ದಾನೆ. ಹೀಗೆ ಕೃಷಿಯ ಬೆಳವಣಿಗೆಗೆ ದಾರಿಯಾಗಿದೆ. ಮನುಷ್ಯನಿಗೆ ತಾನೇ ಉತ್ಪತ್ತಿ ಮಾಡುವವನು ಎಂಬ ಪ್ರಜ್ಞೆ ಜಾಗೃತವಾದೊಡನೆ ಅಸ್ತಿತ್ವದ ಹುಡುಕಾಟ ಆರಂಭವಾಗುತ್ತದೆ. ಇಂತಹ ಕಾಡು–ನಾಡು ಸಂಘರ್ಷದಲ್ಲಿಯೇ ಯಜ್ಞಗಳ ಕಲ್ಪನೆಯೂ ಮೂಡಿ ಬಂದಿರುವುದನ್ನು ಕಾಣಬಹುದಾಗಿದೆ. ವಲಸೆ ಬಂದ ಆರ್ಯರಿಗೂ ಬುಡಕಟ್ಟುಗಳ ಜನರಿಗೂ ಘರ್ಷಣೆ, ತಿಕ್ಕಾಟಗಳು ನಡೆಯುತ್ತಲೇ ಇದ್ದವು ಅನಂತರದಲ್ಲಿ ಗ್ರಾಮಣಿಯ ಜಾಗದಲ್ಲಿ ರಾಜನ ಕಲ್ಪನೆಯೂ ಸೇರುತ್ತಾ ಹೋಗಿದೆ. 'ರಾಜನ್ಯ' ಪದವನ್ನು ರಾಜ, ರಾಜಕುಮಾರ ಅಥವಾ ಕ್ಷತ್ರಿಯನಿಗೆ ಬಳಸಲಾಗುತ್ತಿತ್ತು. ಆ ನಂತರದ ಬೆಳವಣಿಗೆಯಲ್ಲಿ ಈ ರಾಜನ ಪದವಿ ಕುಟುಂಬಕ್ಕೆ ಸೀಮಿತವಾಗಿ ವಂಶಪಾರಂಪರ್ಯವಾಗಿ ಸಿಗುವಂತಾಯಿತು. ಪರ್ಶಿಯನ್ ಪ್ರಾಂತ್ಯದಿಂದ ಬಂದ ಆರ್ಯರಲ್ಲಿದ್ದ ಈ ರಾಜತ್ವದ ಕಲ್ಪನೆ ನಿಧಾನಕ್ಕೆ ಅಧಿಕಾರ ಕೇಂದ್ರೀಕರಣಕ್ಕೆ ದಾರಿಮಾಡಿಕೊಟ್ಟು ಒಡೆಯ–ಆಳು ಎಂಬ ತಾರತಮ್ಯಕ್ಕೆ ನಾಂದಿಯಾಯಿತು. ಬುಡಕಟ್ಟು ಜನರ ಪ್ರಕೃತಿಯಾರಾಧನೆ ಮತ್ತು ಕುಲದೇವತಾರಾಧನೆಗೆ ಬದಲಾಗಿ ಆರ್ಯರು ನಾಯಕನ ಆರಾಧನೆಯನ್ನು ಬೆಳೆಸಿದರು. ಆರ್ಯರ ದೇವತೆ ಇಂದ್ರ ಬೇಟೆಯ ಹಂತದಲ್ಲಿದ್ದ ಬುಡಕಟ್ಟು ಸಮುದಾಯದ ನಾಯಕನಂತೆಯೇ ಇದ್ದವನು. ಇವನು ಆರ್ಯರನ್ನು ಮುನ್ನಡೆಸಿ ವಿಜಯದತ್ತ ಕೊಂಡೊಯ್ದಿರುವ ಕಾರಣಕ್ಕೆ ಅವನನ್ನು ದೈವೀಕರಣಗೊಳಿಸಿ ಇಂದ್ರನೆಂದು ಕರೆದು ಆರಾಧಿಸಿರಬಹುದು. ಇದಕ್ಕೆ ಹಲವು ಪುರಾವೆಗಳು ಋಗ್ವೇದದಲ್ಲಿ ಕಂಡು ಬರುತ್ತವೆಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ಯಜ್ಞಗಳನ್ನು ಮಾಡುವುದರಿಂದ ಮಳೆಬೆಳೆಗಳು ಅಧಿಕಗೊಳ್ಳುತ್ತವೆ. ಭೂಮಿ ತಾಯಿ ಸಂಪ್ರೀತಳಾಗುತ್ತಾಳೆ ಎಂಬಂತಹ ನಂಬಿಕೆಗಳು ಆರ್ಯರಿಂದ ಸೃಷ್ಟಿಗೊಂಡ ಮೇಲೆ ಕಾಡನ್ನು ಸುಡುವಾಗ ಗಣ ಸಮಾಜಗಳಿಂದ ಉಂಟಾಗುತ್ತಿದ್ದ ವಿರೋಧ ಸ್ವಲ್ಪಮಟ್ಟಿಗೆ ದುರ್ಬಲವಾಗುತ್ತಾ ಬಂತು ಕಾಡನ್ನೇ ನಂಬಿಕೊಂಡಿದ್ದ ಬುಡಕಟ್ಟು ಜನರು ಎಂದೂ ಕಾಡಿಗೆ ಬೆಂಕಿ ಹಾಕುವ ಕೆಲಸ ಮಾಡುತ್ತಿರಲಿಲ್ಲ. ಆದರೆ ಆರ್ಯರು ತಮ್ಮ ನೆಲೆಗಳನ್ನು ವಿಸ್ತರಿಸುತ್ತಾ ಬಂದಂತೆ ಬುಡಕಟ್ಟುಗಳು ಹಿಂದೆ ಸರಿಯುತ್ತಾ ಹೋದವು. ಹೀಗೆ ಆರ್ಯರು ತಮ್ಮ ನೆಲೆಗಳನ್ನು ವಿಸ್ತರಿಸುತ್ತಾ ಬಂದಾಗ ಬುಡಕಟ್ಟು ಜನರ ಮೇಲೆ ಹೊಸ ಲೋಹಗಳ ಆಯುಧಗಳನ್ನೂ ಬಳಸುತ್ತಾ ಬಂದರು ಇದರಿಂದ ಸಹಜವಾಗಿಯೇ ಬುಡಕಟ್ಟು ಜನ ಹೆದರಿ ಸೋಲೊಪ್ಪಿಕೊಳ್ಳಬೇಕಾಯಿತು. ಮುಂದೆ ಇಂಥ ಜಾಗಗಳಲ್ಲಿ ಹಳ್ಳಿ ಪಟ್ಟಣಗಳು ರೂಪುಗೊಂಡು ನಗರಗಳ ನಿರ್ಮಾಣಕ್ಕೆ ಆಸ್ಪದ ದೊರೆಯಿತು.

ಈ ಹಂತದಲ್ಲಿಯೇ ನಾಗರಿಕತೆಗಳ ಉಗಮಕ್ಕೆ ಕಾರಣವಾಯಿತು. ಜಾನಪದಕ್ಕೆ ಯಾವಾಗಲೂ ಇರುವ ತಾಜಾತನವನ್ನು ಅನೇಕ ಕಡೆ ಗುರುತಿಸುತ್ತಾರೆ. ಜನಪದರಲ್ಲಿ ಬರುವ ಕಲ್ಲಿನ ಮೇಲೆ ಲಕ್ಕವ್ವ ಎಂಬಾಕೆ ಕಾಲು ತೊಳೆಯುತ್ತಾ ಕೂತಾಗ ಆಕೆಯ ಕಾಲುಪಿಲ್ಲಿ ಬಿಸಿಲಿಗೆ ಹೊಳೆಯುವುದನ್ನು ಜನಪದ ಕವಿ ವಿವರಿಸಿದ ಕೂಡಲೇ ಓದುಗರ ಗಮನ ಸೆಳೆಯುವ ವಾಕ್ಯಗಳಾಗಿ ಬಿಡುತ್ತವೆ. ಅಷ್ಟರಮಟ್ಟಿಗೆ ಸಾರ್ವತ್ರಿಕ ಗುಣಸ್ಥಾನ ಜಾನಪದಕ್ಕಿದೆ ಜಾನಪದವೆಂಬುದು ಕೇವಲ ಹಾಡು ಕುಣಿತವಲ್ಲ. ಅದು ಜೀವನದ ಸಮಸ್ತ ಅಂಗವನ್ನು ವ್ಯಾಪಿಸಿರುವಂಥದ್ದು ಎಂದು ತಿಳಿಯುವುದಾದರೆ ಇದು ಸರಿಯೆನಿಸುತ್ತದೆ. ಇಷ್ಟಾದರೂ ಜನಪದದ

ಕೆಲವು ರೂಪಗಳು ಅಳಿದರೆ ಅವು ಮರುಹುಟ್ಟು ಪಡೆಯುವುದಿಲ್ಲ ಎಂದು ತಿಳಿಯಬೇಕಾಗಿದೆ. ಈ ನಿಟ್ಟಿನಲ್ಲಿ 'ಜನಪದ ದೈವ ವಸತಿಗಳ' ಕುರಿತ ಬರವಣಿಗೆ ಬಹಳ ಮುಖ್ಯವಾಗಿದೆ. ಪ್ರಾಚೀನ ದೈವಗಳೂ ಸಹ ಅಲೆಮಾರಿಗಳ ಜತೆ ಪ್ರಯಾಣ ಬೆಳೆಸಿದ್ದವು. ಈಗಲೂ ದುರುಗ–ಮುರಿಗೆ ದೇವತೆಗಳನ್ನು ಪೆಟ್ಟಿಗೆಯಲ್ಲಿ ಹೊತ್ತುಕೊಂಡು ತಿರುಗುವುದು ಸಾಕ್ಷಿ. ಮಹಾಪುರುಷರ ಸಮಾದಿ ಸ್ಥಳಗಳೇ ದೈವವಸತಿಗಳಾಗಿ ಹೋದವು. ಶಿಷ್ಟ ದೈವಗಳಾದ ರಾಮಕೃಷ್ಣರಿಂದ ಹಿಡಿದು ಸ್ಥಳೀಯ ಜನಪದ ದೇವತೆಗಳಾದ ಮಹದೇಶ್ವರ, ಮಂಟೇಸ್ವಾಮಿ, ನಂಜುಂಡೇಶ್ವರ, ಸಿದ್ದಪ್ಪಾಜಿ ಇವರೆಲ್ಲರೂ ನಡೆದಾಡಿ ತೀರಿಕೊಂಡ ನೆಲೆಗಳೇ ಇಂದು ಪೂಜ್ಯ ಮಂದಿರಗಳಾಗಿವೆ. ಚಿಕ್ಕಲ್ಲೂರು ಸಿದ್ದಪ್ಪಾಜಿ, ರಾಚಪ್ಪಾಜಿ ಈ ಹೊತ್ತಿನ ಗುಡಿಗಳು ಇಂದಿಗೂ ಸಹ ಸಮಾಧಿ ರೂಪದಲ್ಲೇ ಇವೆ. ವಿನಾಯಕನನ್ನು ಗ್ರಾಮೀಣ ರೈತರು ಪೂಜಿಸುವ ಪರಿಯನ್ನು ಈ ರೀತಿ ಹೇಳುತ್ತಾರೆ. ಮಳೆಬಿದ್ದಾಗ ರೈತರು ಬಿತ್ತನೆಗೆ ಹೋಗುವಾಗ ಸಗಣಿ ಉಂಡೆ ಮಾಡಿ ಅದಕ್ಕೊಂದು ಗರಿಕೆಯನ್ನು ಸಿಕ್ಕಿಸಿ ಪುಟ್ಟಿಯಲ್ಲಿಟ್ಟುಕೊಂಡು ಹೋಗುತ್ತಾರೆ. ಗಣೇಶನ ಮೂಲ ಸ್ವರೂಪವೇ ಇದಾಗಿರಬಹುದು. ಗಣೇಶನ ಕಲ್ಪನೆ ಈಗಿರುವಂತೆ ಕಣಜದಂತೆ ಹೊಟ್ಟೆ. ಈ ಹೊಟ್ಟೆಯನ್ನು ಸುತ್ತುವರಿದ ಹಾವು, ಧಾನ್ಯ ತುಂಬಿದ ಕಣಜಕ್ಕೆ ನುಗ್ಗಿದ ಇಲಿ ಗಣೇಶನ ವಾಹನವಾಗಿ, ಗಣೇಶನ ಕೈಯಲ್ಲಿ ರೈತರು ಬಳಸುವ ಹಗ್ಗ, ಕೊಡಲಿ ಇರುತ್ತದೆ. ಗಣೇಶನಿಗೆ ಇಡುವ ನೈವೇದ್ಯವೂ ಸಹ ಹಣ್ಣು, ಹಂಪಲು, ಗರಿಕೆ ಸೀತಾಫಲ, ಬೇಲದಹಣ್ಣು, ಬಾಳೆಹಣ್ಣು ಇಷ್ಟು ಗಣಪತಿಗೆ ಸಲ್ಲುವ ಆಹಾರ ಪದಾರ್ಥಗಳು, ಹೀಗಾಗಿ ಬೆನಕನಾದ ಗಣೇಶನೇ ಭಾರತೀಯ ಕೃಷಿ ಪರಂಪರೆಯ ಜತೆಯಲ್ಲಿಯೇ ಬೆಳೆದು ಬಂದ ದೇವತೆ ಎನ್ನುತ್ತಾರೆ ಲೇಖಕರು.

ಹೀಗೆ ಕಾಡು ನಾಡುಗಳ ಸಂಘರ್ಷದಿಂದ ಹೊರಗಡೆಯಿಂದ ಬಂದ ಆರ್ಯ ಬುಡಕಟ್ಟುಗಳ ಜನರಿಗೂ, ಬುಡಕಟ್ಟುಗಳ ಜನರಿಗೂ ಆಗಿಂದಾಗ್ಗೆ ಯುದ್ಧಗಳು ನಡೆಯುತ್ತಿದ್ದವು. ಆರ್ಯರು ತಮ್ಮಲ್ಲಿರುವ ಜ್ಞಾನದಿಂದ ಯಜ್ಞಗಳು, ಕೃಷಿಯ ಬೆಳವಣಿಗೆ ಮೊದಲಾದವುಗಳನ್ನು ಮೂಲನಿವಾಸಿಗಳಾದ ಬುಡಕಟ್ಟಿನವರ ಮೇಲೆ ಬಲವಂತವಾಗಿ ಏರುತ್ತಿದ್ದರು. ಆ ನಂತರದಲ್ಲಿ ಈ ಮೊದಲೇ ಇದ್ದ ಗ್ರಾಮಣಿ ವ್ಯವಸ್ಥೆ ಶಿಥಿಲಗೊಂಡು 'ರಾಜನ್ಯ' ಅಸ್ತಿತ್ವಕ್ಕೆ ಬರುತ್ತದೆ. ಈ ರಾಜ ಪದವಿಯೇ ಮುಂದೆ ವಂಶಪಾರಂಪರ್ಯವಾಗಿ ಬೆಳೆಯುವ ಹಂತ ತಲುಪಿತು.

**ಪರಾಮರ್ಶನ ಗ್ರಂಥಗಳು**


- ದೇಜಗೌ – *ಜಾನಪದ ಅಧ್ಯಯನ*
- ಕಲಬುರ್ಗಿ, ಎಂಎಂ – ಜಾನಪದ ಮಾರ್ಗ
- ರಂಗಾರೆಡ್ಡಿ ಕೋಡಿರಾಂಪುರ – *ಜಾನಪದ ಸಿದ್ಧಾಂತಗಳು*
- ರಂಗಾರೆಡ್ಡಿ ಕೋಡಿರಾಂಪುರ – *ಬಂಡಾಯ ಜಾನಪದ*
- ರಂಗಾರೆಡ್ಡಿ ಕೋಡಿರಾಂಪುರ – *ಗಂಧದ ಮಡುವ ಕಲಕೂತ*